ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಶೈವಿ/194/ FKCCI ಮಂಥನ್/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು - 560001,
ದಿನಾಂಕ : 12.02.2024.

## ಸುತ್ತೋಲೆ

ವಿಷಯ: FKCCI ಆಯೋಜಿಸುತ್ತಿರುವ 16ನೇ 'Business Plan Presentation' ಸ್ಪರ್ಧೆಯಲ್ಲಿ ಭಾಗವಹಿಸಲು ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಗಳ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕುರಿತು.

ಉಲ್ಲೇಖ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ( FKCCI), ಬೆಂಗಳೂರು, ಇವರ ಪತ್ರಸಂಖ್ಯೆ:ಕೆ.ಎಸ್.ಹೆಚ್.ಇ.ಸಿ/135/ವಿಕ್-ಭಾ/2023-24/879, ದಿನಾಂಕ: 16-12-2023.

*********

FKCCI ಸಂಸ್ಥೆ ಪ್ರತಿ ವರ್ಷ 'Business Plan Presentation' ಸ್ಪರ್ಧೆಯನ್ನು ಆಯೋಜಿಸುವ ಮೂಲಕ ಕರ್ನಾಟಕದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ಪದವಿ, ಸ್ನಾತಕೋತ್ತರ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳಲ್ಲಿ ನವೋದ್ಯಮಿಗಳಾಗುವ (Entrepreneurs) ಸ್ಫೂರ್ತಿಯನ್ನು ಬಿತ್ತುತ್ತಿದೆ. ಈ ವರ್ಷ FKCCI ಮಂಥನ್ ಸ್ಪರ್ಧೆಯ 16ನೇ ಆವೃತ್ತಿಯನ್ನು ಆಯೋಜಿಸಿದ್ದು, ವಿಜೇತ ವಿದ್ಯಾರ್ಥಿಗಳಿಗೆ ಒಟ್ಟು 10 ಲಕ್ಷದವರೆಗೆ ನಗದು ಬಹುಮಾನಗಳನ್ನು ನೀಡುವುದಾಗಿಯೂ ವಿಜೇತರ Business Plan ಗಳನ್ನು ಪ್ರಮುಖ ಜರ್ನಲ್ ಗಳಲ್ಲಿ ಪ್ರಕಟಿಸುವುದಾಗಿಯೂ ಘೋಷಿಸಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿಗಳು ಕೈಗಾರಿಕಾ ನೇತಾರರು, Incubators ಮತ್ತು Accelerators ಜೊತೆಗೆ ಸಂಪರ್ಕವನ್ನು ನಿರ್ಮಿಸಿಕೊಳ್ಳಬಹುದಾಗಿರುತ್ತದೆ ಹಾಗೂ Incubation facilitation, Funding Opportuities ಇವೇ ಮೊದಲಾದ ಬೆಂಬಲ ಪಡೆದುಕೊಳ್ಳಬಹುದಾಗಿರುತ್ತದೆ. ಈ ಸ್ಪರ್ಧೆಯ ಅಂಗವಾಗಿ ನಡೆಸಲಾಗುವ ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶದ ಮೂಲಕ ಹೊಸ Business Idea ಗಳ ಪರಿಚಯ ಮಾಡಿಕೊಳ್ಳಬಹುದಾಗಿರುತ್ತದೆ.

FKCCI ಆಯೋಜಿಸುತ್ತಿರುವ 16ನೇ 'Business Plan Presentation' ಸ್ಪರ್ಧೆಯಲ್ಲಿ ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕಾಗಿದೆ.

2...

ಸ್ಪರ್ಧೆಯ ವಿವರಗಳು:

1. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಬಯಸುವ ವಿದ್ಯಾರ್ಥಿಗಳು ಯಾವುದಾದರೂ ಪದವಿ/ಇಂಜಿನಿಯರಿಂಗ್ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಪದವಿ, ಸ್ನಾತಕೋತ್ತರ ತರಗತಿಗಳಿಗೆ ಅಥವಾ ಪಾಲಿಟೆಕ್ನಿಕ್ ಗಳಲ್ಲಿ ಡಿಪ್ಲೊಮಾ ತರಗತಿಗಳಿಗೆ ಪ್ರವೇಶಾತಿ ಪಡೆದಿರಬೇಕು.
2. ಸದರಿ ಸ್ಪರ್ಧೆಗಾಗಿ ಸಲ್ಲಿಸುವ Business Plan ಜೊತೆಗೆ ಕಾಲೇಜು/ಪಾಲಿಟೆಕ್ನಿಕ್/ವಿಶ್ವವಿದ್ಯಾಲಯ ನೀಡಿರುವ ಗುರುತಿನ ಚೀಟಿಯ ಪ್ರತಿ ಅಥವಾ ಈ ಸಂಸ್ಥೆಗಳಿಂದ ವಿದ್ಯಾರ್ಥಿಗಳ ಫೋಟೋವನ್ನು ದೃಢೀಕರಿಸಿರುವ ಪತ್ರವನ್ನು ಲಗತ್ತಿಸಬೇಕಾಗಿರುತ್ತದೆ.
3. ಈ ಸ್ಪರ್ಧೆಗಾಗಿ ಸಲ್ಲಿಸುವ Business Plan ಅನ್ನು ಗರಿಷ್ಠ 4 ವಿದ್ಯಾರ್ಥಿಗಳು ಸೇರಿ ಸಿದ್ಧಪಡಿಸಬಹುದು. ಹೀಗೆ ಸಿದ್ಧಪಡಿಸಿದ Business Planಅನ್ನು ಪ್ರಸ್ತುತಪಡಿಸುವಾಗ 4 ಜನ ವಿದ್ಯಾರ್ಥಿಗಳೂ ಉಪಸ್ಥಿತರಾಗಿರಬೇಕಾಗುತ್ತದೆ.
4. ಒಬ್ಬ ವಿದ್ಯಾರ್ಥಿ/ಒಂದು ತಂಡ ಒಂದಕ್ಕಿಂತ ಹೆಚ್ಚು Business Plan ಗಳನ್ನು ಸ್ಪರ್ಧೆಗಾಗಿ ಸಲ್ಲಿಸಬಹುದಾಗಿದೆ. ಇಂತಹ ಪ್ರತಿ ಸಲ್ಲಿಕೆಯನ್ನೂ ಪ್ರತ್ಯೇಕವಾಗಿ ಸ್ಪರ್ಧೆಗೆ ಪರಿಗಣಿಸಲಾಗುತ್ತದೆ.
5. ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರತಿ ವಿದ್ಯಾರ್ಥಿ/ಪ್ರತಿ ತಂಡ ನೀಡಬೇಕಾದ ಶುಲ್ಕ ರೂ.999/- (GST ಸೇರಿ) ಆಗಿರುತ್ತದೆ.
6. ಅರ್ಜಿಗಳನ್ನು www.manthan.fkcci.org ಅಥವಾ manthan@fkcci.in ವೆಬ್ ಸೈಟಿನಲ್ಲಿ ನೀಡಲಾಗಿದ್ದು, ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
7. ಸ್ಪರ್ಧೆಯೊಂದಿಗೆ ನಡೆಸಲಾಗುವ knowledge workshops ಮತ್ತು business Plan Presentation ನಲ್ಲಿ ಬಾಗವಹಿಸಲು ಆಯ್ಕೆಯಾಗುವ Outstation ವಿದ್ಯಾರ್ಥಿಗಳು ಪ್ರಯಾಣ ಭತ್ಯೆಯನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

**ವಿದ್ಯಾರ್ಥಿಗಳು ಮೇಲೆ ಸೂಚಿಸಿದ ವೆಬ್‌ಸೈಟಿನಲ್ಲಿ ಸ್ಪರ್ಧೆಗೆ ನೋಂದಣಿ ಮಾಡಿಕೊಳ್ಳಲು ಹಾಗೂ ತಮ್ಮ Business Plan ನ synopsis ಸಲ್ಲಿಸಲು ಕೊನೆಯ ದಿನಾಂಕ: 20-02-2024.**

ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಪ್ರಥಮ ದರ್ಜೆ ಕಾಲೇಜುಗಳ ಮತ್ತು ಇಂಜಿನಿಯರಿಂಗ್ / ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರುಗಳು ನಿರ್ವಹಿಸಬೇಕಾದ ಕರ್ತವ್ಯಗಳು ಈ ಕೆಳಕಂಡಂತಿವೆ:

1. **Business Plan Presentation Competition** ಕುರಿತು ತಮ್ಮ ಕಾಲೇಜುಗಳಲ್ಲಿ ತರಗತಿಗಳಲ್ಲಿ/ಅಸೆಂಬ್ಲಿಯಲ್ಲಿ ಮತ್ತೆ ಮತ್ತೆ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳುವುದು ಹಾಗೂ ಭಿತ್ತಿಪತ್ರಗಳನ್ನು ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.

3...

2. ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಉತ್ತಮವಾದ Business Plan presentation ಗಳನ್ನು ಸುಸಂಬದ್ಧವಾಗಿ ಮತ್ತು ಸ್ಪಷ್ಟವಾಗಿ ಬರವಣಿಗೆಯಲ್ಲಿ ವ್ಯಕ್ತಪಡಿಸಲು ಅಧ್ಯಾಪಕರಿಗೆ ನೆರವಾಗುವಂತೆ ಸೂಚಿಸುವುದು.

3. ಸಂಬಂಧಪಟ್ಟ ಜಂಟಿ ನಿರ್ದೇಶಕರ ಕಛೇರಿಗೆ ಸದರಿ ಸ್ಪರ್ಧೆಯ ಕುರಿತ ಪ್ರಚಾರ, ತಮ್ಮ ಕಾಲೇಜುಗಳ ವಿದ್ಯಾರ್ಥಿಗಳ ಭಾಗವಹಿಸುವಿಕೆ ಮತ್ತು ಸ್ಪರ್ಧೆಗೆ ಸಲ್ಲಿಸಲಾಗುತ್ತಿರುವ Business Plan presentation ಗಳ ಕುರಿತು ಅಂಕಿಅಂಶಗಳನ್ನು ಒಳಗೊಂಡ ವಿವರಪೂರ್ಣ ವರದಿಯನ್ನು ನೀಡುವುದು.

14/7/24

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
3. ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು- ಮಾಹಿತಿಗಾಗಿ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-ಮಾಹಿತಿಗಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್-ಸೈಟ್ ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.